


International Journal of Kannada Research
www.kannadajournal.com

ISSN: 2454–5813
IJKR 2019; 5(4): 74-76
© 2019 IJKR
www.kannadajournal.com
Received: 07-08-2019
Accepted: 09-09-2019

**ಪುಂಡಲೀಕ ಹುನ್ನಳ್ಳಿ**
ಸಂಶೋಧನ ವಿದ್ಯಾರ್ಥಿ
ಡಾ.ಆರ್.ಸಿ.ಹಿರೇಮಠ ಕನ್ನಡ
ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–03

**Corresponding Author:**
**ನಾಗಣ್ಣ ಡಿ.ಎ**
ಸಂಶೋಧನ ವಿದ್ಯಾರ್ಥಿ
ಡಾ.ಆರ್.ಸಿ.ಹಿರೇಮಠ ಕನ್ನಡ
ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–03

# ದಲಿತ ಸಾಹಿತ್ಯ: ಡಾ.ಬಿಆರ್.ಅಂಬೇಡ್ಕರ್

**ಪುಂಡಲೀಕ ಹುನ್ನಳ್ಳಿ**

ಕನ್ನಡ ಸಾಹಿತ್ಯದ ಇತಿಹಾಸವನ್ನು ಒಳಹೊಕ್ಕಾಗ ಪ್ರತಿಯೊಂದು ಸಾಹಿತ್ಯರೂಪವು ಒಂದಿಲ್ಲಾ ಒಂದು ಪ್ರಭಾವ–ಪ್ರೇರಣೆಗಳಿಗೆ ಒಳಪಟ್ಟಂತಹವೇ ಎಂಬುದು ಗೋಚರವಾಗುತ್ತದೆ. ಹಾಗೇ ಈ ದಲಿತ ಸಾಹಿತ್ಯದ ಮೊದಲ ತಲೆಮಾರಿನ ಕವಿಗಳಿಗೆ ಅಂದರೆ ದೇವರಾಯ ಇಂಗಳೆ, ಸೋಸಲೆ ಎಸ್.ಸಿದ್ದಪ್ಪ ಮುಂತಾದ ಕವಿಗಳಿಂದ ಹಿಡಿದು ಇವತ್ತಿನ ಸಿದ್ಧಲಿಂಗಯ್ಯ ಸತ್ಯಾನಂದ ಪಾತ್ರೋಟ, ಎಲ್.ಹನುಮಂತಯ್ಯ ಇವರೆಲ್ಲರಿಗೂ ಡಾ.ಅಂಬೇಡ್ಕರವರ ಬರಹಗಳು ಪ್ರೇರಣೆಯಾಗಿ ನಿಂತಿವೆ. "ನೋವಿನ ನೆಲೆಯಿಂದ ಬಂದ ಬಾಬಾ ಸಾಹೇಬ ಅಂಬೇಡ್ಕರ್ ಸಮಾಜವನ್ನು ಅತ್ಯಂತ ಸೂಕ್ಷ್ಮವಾಗಿ ನೋಡಿದ್ದರು. ಹಾಗಾಗಿ ಅಂಬೇಡ್ಕರ್‌ರವರ ಮನಸ್ಸು ಸಂಸ್ಕಾರಗೊಂಡು ಶೋಷಿತರ, ದಲಿತರ ಧ್ವನಿಯಾಗಿ ನಿಂತರು. 'ನಿಮ್ಮ ಉದ್ಧಾರವನ್ನು ನೀವೇ ಮಾಡಿಕೊಳ್ಳಬೇಕೆಂದು ಕರೆ ನೀಡಿ 1924 ರಲ್ಲಿ ಬಹಿಷ್ಕೃತ ಹಿತಕಾರಣಿ ಸಭೆಯನ್ನು ಆರಂಭಿಸಿದರು. ಆ ಮೂಲಕ ಇಜಣಥಿಚಿಣಜ, Organise and agitate ಇದು ಅಂಬೇಡ್ಕರ್‌ರವರ ಪ್ರಣಾಳಿಕೆಯಾಯಿತು."[1] ಈ ಪ್ರಣಾಳಿಕೆಯಿಂದಲೇ ಪ್ರತಿಯೊಬ್ಬ ದಲಿತ ಸಾಹಿತಿಯೂ ತಾವು ಅನುಭವಿಸಿದ, ತಮ್ಮ ಸಮಾಜದಲ್ಲಿ ನೋಡಿರುವಂತಹ ಘಟನೆಗಳು, ಸಮಾಜದಲ್ಲಿ ಬೇರೂರಿ ನಿಂತ ನಂಬಿಕೆಗಳು, ಸಂಪ್ರದಾಯಗಳನ್ನು ಖಂಡಿಸುತ್ತಾ ಸಾಹಿತ್ಯ ಕ್ಷೇತ್ರದಲ್ಲಿ ಅವುಗಳನ್ನು ತಮ್ಮ ಸಾಹಿತ್ಯದ ವಸ್ತುಗಳನ್ನಾಗಿ ಮಾಡಿಕೊಂಡಿದ್ದಾರೆ.
ಡಾ.ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಎಂಬ ಕವನದಲ್ಲಿ ಜನರನ್ನು ಹೇಗೆ ಸಂಘಟಿಸುತ್ತಾರೆ ಎಂಬುದನ್ನು ಹೀಗೆ ನೋಡಬಹುದಾಗಿದೆ.

> "ಧಿಕ್ಕಾರ ಧಿಕ್ಕಾರ ಅಸಮಾನತೆಗೆ
> ಎಂದೆಂದಿಗು ಧಿಕ್ಕಾರ ಶ್ರೀಮಂತರ ಸೊಕ್ಕಿಗೆ
> ಲಕ್ಷಾಂತರ ನಾಗರಗಳು ಹುತ್ತಬಿಟ್ಟು ಬಂದಂತೆ
> ಊರ ತುಂಬ ಹರಿದರು
> ಪಾತಾಳಕೆ ಇಳಿದರು
> ಆಕಾಶಕೆ ನೆಗೆದರು
> ಬೀದಿಯಲ್ಲಿ ಗಲ್ಲಿಯಲ್ಲಿ
> ಬೇಲಿ ಮಳೆಯ ಮರೆಗಳಲ್ಲಿ
> ಯಜಮಾನರ ಹಟ್ಟಿಯಲ್ಲಿ ಧಣಿಕೂರುವ ಪಟ್ಟದಲ್ಲಿ
> ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು"[2]

ಈ ಕಾವ್ಯದ ಪ್ರತಿಯೊಂದು ಸಾಲುಗಳನ್ನು ನೋಡುತ್ತಾ ಹೋದರೆ ಅಲ್ಲಿ ಶೋಷಿತರು ತಮ್ಮನ್ನು ಶೋಷಣೆಗೈದಿರುವ ಶ್ರೀಮಂತರ ವಿರುದ್ಧ ಸಂಘಟನೆಯನ್ನು ಮಾಡಿ ತಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಡಲು ಈ ಕಾವ್ಯದ ಮುಖಾಂತರ ಜನರನ್ನು ಒಂದುಗೂಡಿಸುವಂತಹ ಕಾರ್ಯವನ್ನು ಮಾಡಿರುವ ಸಿದ್ಧಲಿಂಗ್ಯನವರಿಗೆ ಡಾ.ಬಿ.ಆರ್.ಅಂಬೇಡ್ಕರವರ ಪ್ರಣಾಳಿಕೆಯೇ ಮುಖ್ಯ ಪ್ರೇರಕಶಕ್ತಿಯಾಗಿ ಕಂಡುಬರುತ್ತದೆ.
"ದಲಿತ ಸಾಹಿತ್ಯದ ಮುಖ್ಯ ವಿಶೇಷತೆ ಎಂದರೆ ವಸ್ತುನಿಷ್ಠತೆ ಸಿಟ್ಟು, ಆಕ್ರೋಶ ಮತ್ತು ಪ್ರತಿಭಟನೆ. Form ಗಿಂತ Content ಗೆ ಹೆಚ್ಚು ಒತ್ತುಕೊಟ್ಟು ದಲಿತರಲ್ಲಿ ಅರಿವನ್ನೂ ಸವರ್ಣಿಯರಲ್ಲಿ ಅಪಮಾನವನ್ನೂ

ಉಂಟುಮಾಡುವುದು. ಈ ಸಮಾಜವನ್ನು ತನ್ನ ಚಾರಿತ್ರಿಕ ಮೋಸಕ್ಕಾಗಿ ಪಶ್ಚಾತಾಪಕ್ಕೆ ಗುರಿ ಈ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟದ ಗಟ್ಟಿ ದನಿ."[3] ಹೀಗಾಗಿ ಇಡಿ ದಲಿತ ಸಾಹಿತ್ಯ 'ದಲಿತರ ಸ್ವಾಭಿಮಾನದ ಸಂಕೇತವಾದ ಡಾ.ಬಿ.ಆರ್.ಅಂಬೇಡ್ಕರ್ ಅವರ ಬರಹಗಳಿಂದಲೇ ಎಚ್ಚೆತ್ತುಗೊಂಡು ತಮ್ಮ ಬರವಣಿಗೆಯ ಮೂಲಕವಾಗಿ ಪ್ರಚುರಪಡಿಸುತ್ತಾ ಹೋಗುತ್ತಾರೆ. ಪರಂಪರೆಯಿಂದ ನಡೆಸಿಕೊಂಡು ಬಂದಿರುವ ಸಂಪ್ರದಾಯಗಳನ್ನು ಅನಿಷ್ಟ ಪದ್ಧತಿಗಳಿಂದ ಹೊರ ತರಬೇಕೆಂದು ಡಾ.ಸತ್ಯಾನಂದ ಪಾತ್ರೋಟರು ಒಂದು ಕಾವ್ಯದಲ್ಲಿ ಸಣ್ಣ ಪ್ರಯತ್ನ ಪಟ್ಟಿದ್ದಾರೆ.

"ನಿಮ್ಮ ಮೈಥುನಕ್ಕೆ
ರಂಭೆ ಊರ್ವಸಿ ಮಾತಂಗಿಯಾದದ್ದು
ಅಂದು,
ಋಷಿಗಳ ರಾಜರ ವೇಷ ತೊಟ್ಟು
ನೀವು ಮಾಡಿದ ಕರ್ಮಕಾಂಡ ಸಾಕು!
ನಿಮ್ಮ ಪಲ್ಲಕ್ಕಿ ಹೊತ್ತು ಜಯ ಪರಾಕು ಹೇಳಲು
ನಾವೀಗ,
ಅಪ್ಪ ನೆಡಸಿದ ಆಲದ ಮರಕ್ಕೆ
ನೇಣು ಹಾಕಿಕೊಂಡು ಸಾಯುವ ಮೂಡ ಕುಲದವರಲ್ಲ
ಸ್ವತಂತ್ರರು!"[4]

ಮೇಲ್ವರ್ಗದವರು ತಮ್ಮನ್ನು ತಾವು ಶ್ರೇಷ್ಠರೆಂದು ಹೇಳಿಕೊಳ್ಳಲು, ತಮ್ಮನ್ನು ರಕ್ಷಣೆ ಮಾಡಿಕೊಳ್ಳಲು ತಾವೇ ರಚಿಸಿಕೊಂಡ ಆಚರಣೆಗಳನ್ನು ಕೆಳವರ್ಗದ ಜನರ ಮೇಲೆ ಹೇರಿ ಅವರುಗಳನ್ನು ಆ ಅಂಧ ಆಚರಣೆಗಳಲ್ಲಿಯೇ ಸುತ್ತಾಡಿಸಿ ಅಸಹಾಯಕರನ್ನಾಗಿ ಮಾಡಿದ್ದರು. ಇಂತಹ ಪರಂಪರೆಯಿಂದ ಬಂದ ಸಂಪ್ರದಾಯಗಳನ್ನು ಕಿತ್ತೆಸೆಯುವ ಕೆಲಸವನ್ನು ಇಲ್ಲಿ ಕಾಣಬಹುದು. ಇದೇ ರೀತಿ ಹೀನ ಧಾರ್ಮಿಕ ಅಂಧಾನುಕರುಣೆಗೆ ಒಳಗಾಗಿ ವೇಶ್ಯಾವಾಟಿಕೆಯನ್ನು, ಹಿರಿಯರು ಒಪ್ಪಿಕೊಂಡಂತಹ ನಿಯಮಗಳನ್ನು ತ್ಯಜಿಸಬೇಕೆನ್ನುತ್ತಾರೆ ಪಾತ್ರೋಟರು. "ಇಂತಹ ಬಂಧನಗಳ ಬಿಡುಗಡೆಗೆ ಸ್ವಾಭಿಮಾನವೊಂದೇ ಸರಿಯಾದ ಮದ್ದುಯನ್ನುತ್ತಾರೆ. ಆದರೆ ದಲಿತರು ಅದೆ ಸಂದರ್ಭದಲ್ಲಿ ದುರಭಿಮಾನವುಳ್ಳವರಾಗಕೂಡದೆಂದು ಎಚ್ಚರಿಸುತ್ತಾರೆ. ದುರಭಿಮಾನ, ದುರಂಕಾರಗಳನ್ನು ತೊರೆದು ಆತ್ಮ ಗೌರವವುಳ್ಳ ಸ್ವಾಭಿಮಾನಿಗಳಾಗಿ ಬದುಕಲು ಕರೆಕೊಟ್ಟಿದ್ದಾರೆ."[5] ಅಸ್ಪೃಶ್ಯತೆಯನ್ನು ವೇದ–ಪುರಾಣ ಕಾಲದಿಂದಲೂ ಉಳಿಸಿಕೊಂಡು ಬಂದ ಸಮಾಜವನ್ನು ಶಾಹು ಮಹಾರಾಜರ ಸಹಾಯದಿಂದ 'ಮೂಕ ನಾಯಕ' ಎಂಬ ಪತ್ರಿಕೆಯಿಂದ ದಲಿತರ ಏಳ್ಗೆಗೆ ಅಂಬೇಡ್ಕರವರು ಹೇಗೆ ಕಾರಣರಾದರೋ ಅವರ ಹಾಗೆ ದಲಿತ ಸಾಹಿತಿಗಳು ಕೂಡಾ 'ಪಂಚಮ', 'ಹೊಸದಿಕ್ಕು' ಎಂಬ ಪತ್ರಿಕೆಗಳು ಕೆಳ ಸಮೂದಾಯದಲ್ಲಿರುವ ಜನರ ಅರಿವುಗೊಸ್ಕರ ಪ್ರಕಟಗೊಂಡಿವೆ.

"ನಿನ್ನ ಉಡ್ಯಾಗದಿವೆಂದು ಮ್ಯಾಲೆ
ನಾವು ನಿನ್ನ ಮಕ್ಕಳು
ನಮಗೂ ಹಕ್ಕಐತಿ ಕೇಳ್ತಿವಿ"[6]

"ಭಾರತೀಯ ಸಮಾಜದಲ್ಲಿ ಅವಮಾನಿತ ವರ್ಗಗಳು ಪರಾಜಿತ ಗುಂಪುಗಳು ಪ್ರತಿಷ್ಠಿತರ ಎದುರಿಗೆ ಹೊಸ ರೀತಿಯ ಆತ್ಮ ವಿಶ್ವಾಸವನ್ನು ಸೃಷ್ಟಿಸಿಕೊಳ್ಳಬೇಕು."[7] ಅದರಿಂದ ಬದಲಾವಣೆಗಳನ್ನು ಕಂಡುಕೊಳ್ಳುವ ಸಾಧ್ಯತೆಗಳಿವೆ. ಧರ್ಮ, ಜಾತಿ, ಲಿಂಗಗಳೆಂಬ ಬೇಧಭಾವ ತನ್ನ ಬಾಹುಗಳ ಚಾಚಿಕೊಂಡಂತೆಲ್ಲ ಮನುಷ್ಯ–ಮನುಷ್ಯನ ಮಧ್ಯ ಅಂತರಗಳು ಹೆಚ್ಚುತ್ತಾ ಸಾಮಾಜಿಕ ವಿಘಟನೆಗಳುಂಟಾಗಲು ಅವಕಾಶಗಳನ್ನು ನೀಡುವುದರೊಂದಿಗೆ ಆಸ್ತಿ–ಅಂತಸ್ತುಗಳಲ್ಲಿ ಅಸಮಾನತೆಯ ಹೊಗೆ ಆಡಲು ಪ್ರಾರಂಭವಾಯಿತು. ಹೀಗೆ ಬೆಳೆಯುತ್ತಾ, ಬೆಳಯುತ್ತಾ ಜಾತಿ–ಧರ್ಮಗಳೇ ರಾಷ್ಟ್ರವನ್ನು ಆಳಲು ಸುರುವಾದಾಗಿನಿಂದ ಸಮಾನತೆ ಎಂಬ ಮಾತು ಕಾಣೆಯಾಗಿ ವರ್ಗವ್ಯವಸ್ಥೆ, ಜಾತಿವ್ಯವಸ್ಥೆ, ಲಿಂಗ ತಾರತಮ್ಯಗಳು ಹೆಚ್ಚುತ್ತಾ ಕೆಲವು ಸಮೂದಾಯಗಳು ಚೇತರಿಸಿಕೊಂಡಿವೆ. ಸಮಸ್ಯೆಗಳನ್ನು ಎದುರಿಸುತ್ತಲೇ ಸಾಗಿರುವುದಕ್ಕೆ ಇಂಥ ಪರಿಸ್ಥಿತಿಯನ್ನು ನೋಡಿದರೆ ಸಾಕೆನಿಸುತ್ತದೆ. ದಲಿತರು ಎನಿಸಿಕೊಂಡವರು ಭಾರತದಲ್ಲಿ ಜೀತಕ್ಕೆ ಮೇಲ್ವರ್ಗದವರ ಸೇವೆಗೆ ಮೀಸಲು ಮಾಡಿಕೊಂಡು ಸಾಂಸ್ಕೃತಿಕ ರಂಗದಿಂದಲೂ ಅವರ ಬದುಕನ್ನು ಮೊಟಕುಗೊಳಿಸಲಾಗಿದೆ. ಇಂತಹ ಸಂಗತಿಗಳನ್ನು ಮನಗಂಡಿರುವ ಅಂಬೇಡ್ಕರವರು ಸಾಮಾಜಿಕ ನ್ಯಾಯಕ್ಕಾಗಿಯೇ ಪಣ ತೊಟ್ಟು, ಪಡೆಯುವವರೆಗೆ ಹೋರಾಡಿದರು ಅವೆಲ್ಲ ಕಾವ್ಯಗಳಾಗುತ್ತಾ ಬಂದಿರುವುದನ್ನು ಕಾಣಬಹುದು.

"ದಲಿತರೆದೆಯ ಮೇಲೆ ನಡೆದಿರುವ
ಈ ಕೆಂಪುಕೋಟೆ ರಾಜ್ಯಭಾರದಲ್ಲಿ
ಪ್ರಜಾತಂತ್ರದ ಬಣ ಹಾಕಿ
ಲೋಕದೆದರು ಸಾಗಿರುವ
ಈ ನಾಮರ್ಧ ರಾಮ ರಾಜ್ಯದಲ್ಲಿ
ಸಾವಿರದೊಂಭೈನೂರೈವತ್ತರಂದು
ಜನವರಿ ಇಪ್ಪತ್ತಾರಂದು
ರಾಜಕೀಯ ಸಮಾನತೆ ಪಡೆದವು."[8]

ದಲಿತರ ಪಾಲಿಗೆ ಅಭಿವೃದ್ಧಿ ಎಂಬುದು ಮರಿಚಿಕೆ ಎಂದು ಬಾವಿಸಿದ್ದ ಕಾಲದಲ್ಲಿ ಅಂಬೇಡ್ಕರವರು ಬಾಳಿಗೆ ಆಶಾಕಿರಣವಾಗಿ ಮೂಡಿಬಂದರು. "ಅಸ್ಪೃಶ್ಯತೆಯ ವಿಭಿನ್ನ ಮುಖಗಳನ್ನು ವ್ಯಕ್ತಿಯ ಹಿನ್ನಲೆಯಲ್ಲಿ ಬಿಚ್ಚಿಡುವಂತೆ ಜನಾಂಗದ ಹಿನ್ನಲೆಯಲ್ಲೂ ತೆರೆದಿಡಲಾಗಿದೆ. ಕೆಲವು ವ್ಯಕ್ತಿಗತ ತಾಜಾ ಅನುಭವಗಳಾದರೆ, ಸಾಮಾನ್ಯೀಕರಣದ ಅನುಭವಗಳು ಮತ್ತೊಂದೆಡೆ ಗೋಚರವಾಗುತ್ತವೆ."[9] ತಲೆತಲೆಮಾರುಗಳಿಂದ ಮಾಡಿಕೊಂಡು ಬಂದಿರುವ ಅನಿಷ್ಟ ವೃತ್ತಿಯನ್ನು ತೊರೆಯುವುದಲ್ಲದೆ ಪುರೋಹಿತಶಾಹಿಗಳು ತಮ್ಮ ಕೈಯಲ್ಲಿ ಹಿಡಿದುಕೊಂಡಿರುವ ರಾಜಕೀಯವನ್ನು ದಲಿತರು ತಮ್ಮದಾಗಿಸಿಕೊಂಡಿರುವ ಅವರ ಬದುಕಿನ ಇನ್ನುಳಿದ ಕ್ಷೇತ್ರಗಳಾದ ಧಾರ್ಮಿಕ, ಶಿಕ್ಷಣ, ಆರ್ಥಿಕತೆಯಲ್ಲಿ ಅಭಿವೃದ್ಧಿಯನ್ನು ಪಡೆಯಲು ಇದು ಅಡಿಗಲ್ಲಾಗಿ ನಿಲ್ಲುತ್ತದೆ ಎಂಬ ವಿಚಾರಗಳು ಅಂಬೇಡ್ಕರವರ ಪೂರ್ವಾಲೋಚನೆಗಳಾಗಿದ್ದವು. ಹಾಗಾಗಿಯೇ ಸಂವಿಧಾನಿಕವಾಗಿ ರಾಜಕೀಯ ಹಕ್ಕು ಪಡೆದು ಮೌಢ್ಯ ಮತ್ತು ಅಂಧಾನುಕರಣಗಳಿಂದ ಮುಕ್ತಿಯನ್ನು ನೀಡಲು ಶ್ರಮಿಸಿರುವುದು ಮೇಲಿನ ಪದ್ಯದಲ್ಲಿ ಮೂಡಿಬಂದಿದೆ.

ಅಂಬೇಡ್ಕರವರು ಕೆಳ ಸಮುದಾಯದಲ್ಲಿ ಜನಸಿದ್ದರೂ ಅವರ ಆಲೋಚನೆಗಳು ಮಾತ್ರ ಜಾಗತೀಕ ಮಟ್ಟದ ಶೋಷಿತ ಮತ್ತು ಶೋಷಿತೇತರ ಜನಾಂಗೀಯ ಚಿಂತನೆಗಳನ್ನು ಮಾಡುತ್ತವೆ. ಅವರು ಬಯಸುವ ಸಮಾಜ ಶಿಕ್ಷಣ, ಸಂಪತ್ತಿನ ಸಮಾನತೆ ಆರ್ಥಿಕ ಸುಧಾರಣೆ, ಧಾರ್ಮಿಕವಾಗಿ ವೈಚಾರಿಕ ನಿಲುವುಗಳು ಸಾಮಜಿಕವಾಗಿ ಸ್ವಸ್ಥ ಮತ್ತು ಶುಭ್ರ ಇರುವನ್ನು ಬಯಸುತ್ತವೆ. ಭಾರತದಂತಹ ದೇಶದಲ್ಲಿ ಎಂಥಹ ಅನಾಹುತಗಳು ಹಿಂದೆ ನಡೆದಿದ್ದರೂ ಮುಂದಿನ ಭವಿಷ್ಯವನ್ನು ತಿದ್ದುಕೊಳ್ಳುತ್ತಾ ನೆಮ್ಮದಿಯ

ಜೀವನವನ್ನು ಕಳೆಯಲು ಅವರ ಪ್ರೇರಣೆ ಅವಶ್ಯಕವೆನಿಸದೆ ಇರಲಾರದು.

**ಅಡಿ ಟಿಪ್ಪಣಿ**

೧. ೧.ಕನ್ನಡದಲ್ಲಿ ದಲಿತ ಸಾಹಿತ್ಯ, ಡಾ.ಎ.ರಂಗಸ್ವಾಮಿ(ಪ್ರ.ಸಂ), ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯ, ಮೈಸೂರು–೨೦೧೦, ಪುಟ–೦೬

೨. ಮೆರವಣಿಗೆ, ಡಾ.ಸಿದ್ಧಲಿಂಗಯ್ಯ, ಅಂಕಿತ ಪುಸ್ತಕ, ಬೆಂಗಳೂರು–೨೦೦೦, ಪುಟ–೮೫

೩. ಕನ್ನಡದಲ್ಲಿ ದಲಿತ ಸಾಹಿತ್ಯ, ಡಾ.ಎ.ರಂಗಸ್ವಾಮಿ(ಪ್ರ.ಸಂ), ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯ, ಮೈಸೂರು–೨೦೧೦, ಪುಟ–೧೦

೪. ಸತ್ಯಾನಂದ ಪಾತ್ರೋಟ, ಕರಿನೆಲದ ಕಲೆಗಳು, ಬಸವರಾಜ ಪ್ರಿಂಟಿಂಗ್ ವರ್ಕ್ಸ್ ಬಾಗಲಕೋಟ– ೧೯೮೫(ದ್ವಿ.ಮು), ಪುಟ–೧೦.೧೧

೫. ಡಾ.ಜಿ.ಬಿ.ನಂದನ, ಡಾ.ಬಿ.ಆರ್.ಅಂಬೇಡ್ಕರ ಅಸ್ಪೃಶ್ಯತೆಯ ವಿಮೋಚನೆ, ಪ್ರಸಾರಂಗ ಕರ್ನಾಟಕ ವಿಶ್ವ ವಿದ್ಯಾಲಯ ದಾರವಾಡ–೨೦೦೬, ಪುಟ–೮೨

೬. ಅರವಿಂದ ಮಾಲಗತ್ತಿ, ಮೂಕನಿಗೆ ಬಾಯಿ ಬಂದಾಗ, ಶೈಲ ಪ್ರಕಾಶನ ಮುದ್ದೇಬಿಹಾಳ–೧೯೮೧, ಪುಟ–೦೭

೭. ದಲಿತ ಸಾಹಿತ್ಯ ಮತ್ತು ಸಂಸ್ಕೃತಿ, ಡಾ.ಎಚ್.ಟಿ.ಪೋತೆ, ಸಪ್ನ ಬುಕ್ ಹೌಸ ಬೆಂಗಳೂರು–೨೦೧೧, ಪುಟ–೬೧

೮. ಮ.ನ.ಜವರಯ್ಯ, ಕೇಳು ಜಗಮಾದಿಗ ಹೊಲೆಯ, ಸಿದ್ದಾರ್ಥ ಗ್ರಂಥಮಾಲೆ, ಮೈಸೂರು–೧೯೮೧, ಪುಟ–೧೪

೯. ಪ್ರೊ.ಅರವಿಂದ ಮಾಲಗತ್ತಿಯವರ ಸಾಹಿತ್ಯ ಮತ್ತು ಚಿಂತನೆ, ಡಾ.ಎನ್.ಎಸ್.ಶಂಕರೇಗೌಡ, ಚೇತನ ಬುಕ್ ಹೌಸ ಮೈಸೂರು–೨೦೦೫, ಪುಟ–೯